ತಾರೀಖು 6ನೆ ಮೇ 1907.

ನಂ. 10384—ಸ್ಯಾನಿಟರಿ 66-06—47, ಸಮಸ್ತ ಜನರ ತಿಳಿವಳಿಕೆಯ ಒಸ್ಯೆ ಇದರಿಂದ ಪ್ರಸಿದ್ಧಪಡಿಸುವುದೇನಂದರೆ :— ಹಾಸನ ಡಿಸ್ಟ್ರಿಕ್ಟಿನಲ್ಲಿರುವ ಇದರಡಿ ನಮೂದಿಸಿರುವ ಪ್ರದೇಶಗಳು ಎಪಿಡೆಮಿಕ್ ಡಿಸೀಸೆಸ್ ರೆಗ್ಯುಲೇಷನ್ ಎಂಬ ಸಾಂಕ್ರಾಮಿಕ ಜಾಡ್ಯಗಳಿಗೆ ಸಂಬಂಧಪಟ್ಟ ಕಾನೂನನ್ನು ಅನುಸರಿಸಿ 1898ನೆಯ ಸ್ರ್ಷದ ಫೆಬ್ರವರಿ 10ನೆಯ ತಾರೀಖಿನ ನಂಬರ್ 9385—ಮಿಸಲೇನಿಯಸ್ ಫೈಲ್ 21—96 ಮತ್ತು ನಂಬರ್ 9384—ಮಿಸಲೇನಿಯಸ್ ಫೈಲ್ 21-96 ಈ ನಂಬರುಗಳ ಇಸ್ತಿಹಾರ್‌ನಾಮೆಗೆ ಕೂಡನೆ ಪ್ರಕಟಿಸಲ್ಪಟ್ಟ ರೆಗ್ಯುಲೇಷನುಗಳ ಉದ್ದೇಶಾರ್ಥಗಳಿಗಾಗಿ ಪ್ಲೇಗು ತಗುಲಿದ ಪ್ರದೇಶಗಳೆಂದು ಎಣಿಸಲ್ಪಡುವವು.

ಸ್ಥಳ.					ತಾಲ್ಲೂಕು.
ಜೋಡಿ ಲೋಕನಹಳ್ಳಿ	...	...	...	...	ಹಾಸನ.
ಕಾಟೆಹಳ್ಳಿ	...	...	...	...	ಡಿಟೋ

ತಾರೀಖು 4ನೆ ಮೇ 1907.

ನಂ. 10343—ಮೆಡಿಕಲ್ 4-06—42, ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೆಲಸ ನೋಡುತ್ತಿರುವ ಹಂಗಾಮಿ ಸಬ್ ಅಸಿಸ್ಟೆಂಟ್ ಸರ್ಜನ್ ಮಿ॥ ಎಫ್. ಫರ್ನಾಂಡಿಸ್ ರವರನ್ನು, 1907ನೆ ಇಸವಿಯ ಏಪ್ರಿಲ್ 9ನೆ ತಾರೀಖಿನ 9272—ಮೆಡಿಕಲ್ 4-06—37ನೆ ನಂಬರಿನ ಸರ್ಕಾರಿ ಇಸ್ತಿಹಾರ್‌ನಾಮೆಯಲ್ಲಿ ದಾವಣಗೆರೆ ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿಗೆ ವರ್ಗಾಯಿಸಲ್ಪಟ್ಟ ಸಬ್ ಅಸಿಸ್ಟೆಂಟ್ ಸರ್ಜನ್ ಮಿ॥ ಕೆ. ಅನಂತರಾಮಯ್ಯಂಗಾರ್‌ರಿಗೆ ಬದಲಾಗಿ, ಸಕಲೇಶಪುರದ ಲೋಕಲ್ ಫಂಡ್ ಡಿಸ್ಪೆನ್ಸರಿಯ ಚಾರ್ಜಿಗೆ ವರ್ಗಾಯಿಸಿ ಇದೆ.

ತಾರೀಖು 7ನೆ ಮೇ 1907.

ನಂ. 10440— ಮೆಡಿಕಲ್ 4-06—43, 1907ನೆ ಇಸವಿಯ ಏಪ್ರಿಲ್ 15ನೆ ತಾರೀಖಿನ 9571 ಮೆಡಿಕಲ್ 4-06ನೆ ನಂಬರ್ ಇಸ್ತಿಹಾರ್‌ನಾಮೆಯನ್ನು ರದ್ದುಮಾಡಿ, ಈ ಕೆಳಗೆ ನಮೂದಿಸುವ ವೈದ್ಯಾಧಿಕಾರಿಗಳ ವರ್ಗಾವರ್ಗಿಯನ್ನು ಮಂಜೂರ್ ಮಾಡಿ ಇದೆ :—

ದರ್ಜೆ.	ಹೆಸರು.	ಇಂದ.	ಗೆ.	ಷರಾ.
ಸಿವಿಲ್ ಸರ್ಜನ್.	ಮಿ॥ ಇ. ಎಸ್. ಕೃಷ್ಣಸ್ವಾಮಿ ಐಯ್ಯರ್ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ್.	ಬೆಂಗಳೂರು ಡಿಸ್ಟ್ರಿಕ್ಟ್ ಮತ್ತು ವಿಕ್ಟೋರಿಯಾ ಆಸ್ಪತ್ರೆಯ ಗಂಡುಸರ ಮೆಡಿಕಲ್ ಡಿವಿಜನಿನ ಚಾರ್ಜ್.	ಮೈಸೂರು ಡಿಸ್ಟ್ರಿಕ್ಟ್ ಮತ್ತು ಜೈಲ್ ಮತ್ತು ಶ್ರೀಮನ್ಮಹಾರಾಣಿಯವರ ಆಸ್ಪತ್ರೆಯ ಸೂಪರಿಂಟೆಂಡೆಂಟ್.	
ಡಿಟೋ	ಮಿ॥ ಟಿ. ಎಸ್. ನಂಜಪ್ಪ, ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಸ್ಯಾನಿಟರಿ ಆಫಿಸರ್.	ಮೈಸೂರು ಡಿಸ್ಟ್ರಿಕ್ಟ್ ಮತ್ತು ಜೈಲ್ ಮತ್ತು ಶ್ರೀಮನ್ಮಹಾರಾಣಿಯವರ ಆಸ್ಪತ್ರೆಯ ಸೂಪರಿಂಟೆಂಡೆಂಟ್	ಮೈಸೂರು ಅರಮನೆ ಡಿಸ್ಪೆನ್ಸರಿ.	ಚಾರ್ಜ್ ಕೊಟ್ಟ ನಂತರ ವರ್ಗಪಟ್ಟ ಕೆಲಸದಮೇಲೆ ಹಾಜರಾಗತಕ್ಕದ್ದು. ಕಾಹಿಲೆ ಸಬಬು ರಜಾವಿನ ಮೇಲೆ ಇರುವ ಮಿ॥ ಸಿ. ಜಿ. ಪನುರ್ಮಾಸಿಂಗರವರಿಗೆ ಬದಲಾಗಿ.

ತಾರೀಖು 7ನೆ ಮೇ 1907.

ನಂ. 10405—ಲೋ. ಬೋ. 422-06—2, ದೊಡ್ಡಬಳ್ಳಾಪುರದ ತಾಲ್ಲೂಕು ಬೋರ್ಡಿನ ಸಭಿಕರು ಮಿ॥ ಅಬ್ದುಲ್ ಖಾದರ್ ಸಾಬರು, ತಮ್ಮ ಸಭಿಕತನಕ್ಕೆ ರಾಜೀನಾಮೆಯನ್ನು ಕೊಟ್ಟಿರುವಂತೆ ರಿಪೋರ್ಟಾಗಿರುವುದರಿಂದ ಸದರಿ ತಾಲ್ಲೂಕು ಬೋರ್ಡಿನ ಸಭಿಕರ ಪಟ್ಟಿಯಿಂದ ಅವರ ಹೆಸರನ್ನು ವಜಾ ಮಾಡಲಾಗುವುದು.

ತಾರೀಖು 1ನೆ ಮೇ 1907.

ನಂ. ರೆ. 9639—ಲ್ಯಾ. ರೆ. 312-06—6, ಬೆಂಗಳೂರು ಡಿಸ್ಟ್ರಿಕ್ಟ್ ಅಸಿಸ್ಟೆಂಟ್ ಕಮಿಷನರ್, ಮಿ॥ ಟಿ. ತಂಬೂಚೆಟ್ಟಿ, ಬಿ. ಎ. ಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷನುಗಳ 177ನೆ ಪ್ರಕರಣದ ಮೇರೆಗೆ ಅವರು ಉಪಯೋಗಿಸಿಕೊಳ್ಳುವ ತಾರೀಖಿನಿಂದ 2 ತಿಂಗಳು 20 ದಿವಸಗಳ ಪ್ರಿವಿಲೇಜ್ ರಜಾವನ್ನು ಕೊಟ್ಟಿದೆ.

ತಾರೀಖು 2ನೆ ಮೇ 1907.

ನಂ. ರೆ. 9672—ಲ್ಯಾ. ರೆ. 427-06—7, ಸ್ರ 1907ನೆ ಇಸವಿಯ ಏಪ್ರಿಲ್ 5ನೆ ತಾರೀಖಿನ ಆರ್. 9018—ಎಲ್. ಆರ್. 427-06—4ನೆ ನಂಬರ್ ಇಸ್ತಿಹಾರ್‌ನಾಮೆಯಲ್ಲಿ ಅಸಿಸ್ಟೆಂಟ್ ಕಮಿಷನರ್ ಮಿ॥ ವಿ. ಆರ್. ಶ್ಯಾಗರಾಜ ಐಯ್ಯರ್, ಎಂ. ಎ., ಯವರಿಗೆ ಕೊಟ್ಟ ಎರಡೂವರೆ ತಿಂಗಳ ಪ್ರಿವಿಲೇಜ್ ರಜಾವನ್ನು ಇನ್ನೂ ಅರ್ಧ ತಿಂಗಳ ವರಗೆ ಹೆಚ್ಚಿಸಿ ಇದೆ.